ದಿನಾಂಕ 20.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ. ಟಿ ಎನ್ ಎಸ್ ವಕೀಲರಿಂದಃ</u>**

ನಾನು ನ್ಯಾಯಾಲಯಕ್ಕೆ 15 ವರ್ಷಗಳಿಂದ ಕೇಸುಗಳ ವಿಚಾರವಾಗಿ ಬರುತ್ತಿದ್ದೇನೆ. ಮಂಜುನಾಥ ರವರ ವಾಸದ ಮನೆಯ ಚೆಕ್‌ಬಂದಿ ಗೊತ್ತಿಲ್ಲ. ಆದರೆ ನಮ್ಮ ಮನೆಯಿಂದ 20 ಮೀ. ಅಂತರವಿದೆ. ಬ್ಯಾಂಕ್ ನಲ್ಲಿ ಸಾಲ ಯಾರ ಹೆಸರಿನಲ್ಲಿ ಎಷ್ಟು ಇದೆ ಎಂದರೆ ಸಾಕ್ಷಿಯು ಎದುರುದಾರರ ತಂದೆಯು ಎದುರುದಾರಳು ಸಾಲ ಮಾಡಿದ್ದಾರೆ ಎಂದು ತಿಳಿಸಿದ್ದಾರೆ. ಅದನ್ನು ಬಿಟ್ಟರೇ ಬೇರೆ ವಿಚಾರ ಗೊತ್ತಿಲ್ಲ. ಎರಡು ಮೂರು ವರ್ಷಗಳಿಂದ ಅವರು ಗಲಾಟೆ ಮಾಡಿಕೊಳ್ಳುತ್ತಿರುವ ವಿಚಾರ ಗೊತ್ತಿದೆ. ಎದುರುದಾರಳ ಮತ್ತು ಅರ್ಜಿದಾರರು ನಡುವೆ ಯಾಕೆ ಗಲಾಟೆ ಆಗುತ್ತಿತ್ತು ಎಂದರೆ ಸಾಕ್ಷಿಯು ಯಾವ ವಿಚಾರಕ್ಕೆ ಗಲಾಟೆ ಆಗುತ್ತಿತ್ತು ಗೊತ್ತಿಲ್ಲ ಆದರೆ ಅವರು ವೈಯಕ್ತಿಕ ಕುಟುಂಬ ಕಲಹ ಎಂದು ನುಡಿಯುತ್ತಾರೆ. ಸದರಿ ಪ್ರಕರಣದ ವಿಚಾರವನ್ನು ಎದುರುದಾರರೇ ತಿಳಿಸಿದ್ದಾರೆ. ಅವರೇ ನನ್ನನ್ನು ಸಾಕ್ಷ್ಯ ಹೇಳಲು ಕರೆದಿದ್ದಾರೆ. ಯಾವ ಸಾಕ್ಷ್ಯ ಹೇಳ ಬೇಕೆಂದು ತಿಳಿಸಿದ್ದಾರೆ ಎಂದರೆ ಸಾಕ್ಷಿಯು ಗಂಡ-ಹೆಂಡತಿ ಜಗಳ ಆಗುತ್ತಿದ್ದು ಅರ್ಜಿದಾರರು ವಿಚ್ಛೇದನಕ್ಕೆ ಹಾಕಿದ್ದಾರೆ ಎಂದು ಗೊತ್ತಿತ್ತು. ಅರ್ಜಿದಾರರ ಮತ್ತು ಎದುರುದಾರರ ನಡುವೆ ಪೊಲೀಸ್ ಕೇಸ ಆದ ವಿಚಾರ ನನಗೆ ಗೊತ್ತಿದೆ. ಮಂಜುನಾಥ ರವರು ದೂರು ಕೊಟ್ಟಿರುವ ವಿಚಾರ ನನಗೆ ಗೊತ್ತಿದೆ. ಮಂಜುನಾಥ ರವರ ಮಗ ದೂರು ಕೊಟ್ಟಿರುವ ವಿಚಾರ ನನಗೆ ಗೊತ್ತಿಲ್ಲ. ನಾನು ಆ ಕೇಸಿನಲ್ಲಿ ಸಾಕ್ಷಿ ಆಗಿಲ್ಲ.

ಅರ್ಜಿದಾರರ ಮಕ್ಕಳು ಈಗ 3 ವರ್ಷದಿಂದ ಅರ್ಜಿದಾರರ ಜೊತೆ ಇದ್ದಾರೆ. ಅರ್ಜಿದಾರರ ಮೇಲೆ ಎದುರುದಾರಳು ಆಗಿನ ತಹಶೀಲ್ದಾರ, ಎಸಿ, ಡಿಸಿ ಯವಗೆ ದೂರು ಕೊಟ್ಟಿರುವ ವಿಚಾರ ನನಗೆ ಗೊತ್ತಿದೆ. ಸದರಿ ದೂರಿನ ಪ್ರತಿಗಳನ್ನು ನಾನು ನೋಡಿದ್ದೇನೆ. ಅದರಿಂದ ವಿಚಾರಣೆ ನಡೆದು ಅರ್ಜಿದಾರರಿಗೆ ಎಷ್ಟೆಲ್ಲಾ ತೊಂದರೆ ಆಯಿತು ಅನ್ನುವ ವಿಚಾರ ನನಗೆ ಗೊತ್ತಿಲ್ಲ. ಎದುರುದಾರಳ ಅಣ್ಣ ಸಣ್ಣವನಿದ್ದಾಗಿನಿಂದಲೂ ಪರಿಚಯ. ಅವರು ಡಿಎಸ್ ಎಸ್ ರಾಜ್ಯಾಧ್ಯಕ್ಷ ಎಂದರೆ ಸರಿ. ನಾನು ಲೆಕ್ಕಪರಿಶೋಧಕನಾಗಿದ್ದೇನೆ. ಎದುರುದಾರರ ಮಾತು ಕೇಳಿಕೊಂಡು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮದುವೆಯಾದಾಗಿನಿಂದಲೂ ನಮ್ಮ ಮನೆಯ ಎದುರುಗಡೆಯೇ ವಾಸ ಇದ್ದಾರೆ. ನಾನು ಅವರ

ಮನೆಗೆ ಹೋಗಿ ಬರುವ ಹವ್ಯಾಸ ಇರಲಿಲ್ಲ.  ಮೊದಲ ಬಾರಿಗೆ 2021 ಅಥವಾ 2022 ರಲ್ಲಿ ಹೋಗಿದ್ದೆ. ಅವರು ಹೇಳಿ ಕೊಟ್ಟ ರೀತಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ, ಚಿಂತಾಮಣಿ.